ಒ.ಎಸ್. ನಂ.48/2021
ಪಿಡಬ್ಲು-1

ದಿನಾಂಕ 27.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು 4ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಗಂಡ ಕೃಷಿ ಕೆಲಸ ಮಾಡುತ್ತಾನೆ. ನನ್ನ ಗಂಡನ ಕುಟುಂಬಕ್ಕೆ 16-ಎಕರೆ ಜಮೀನು ಇದೆ ಆದರೆ ಅದರ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ನನ್ನ ಊರು ಜನಿವಾರವಿದ್ದು ನನಗೆ ಪ್ರತಿವಾದಿಯ ಪರಿಚಯವಿದೆ.

ನನ್ನ ಗಂಡ ಕೃಷಿ ಕೆಲಸದ ಜೊತೆ ಸಾಮಾಜಿಕ ಸೇವೆ ಅಂತಾ ಜನರಿಗೆ ಬೆಳೆ ಸಾಲ ಕೊಡಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ 02 ಎಕರೆ ಜಮೀನನ್ನು ಪ್ರತಿ ಎಕರೆಗೆ 4 ಲಕ್ಷದಂತೆ ಹಣ ನೀಡಿ ಖರೀದಿ ಮಾಡಿರುತ್ತೇನೆ. ನಾನು ಒಟ್ಟು 8 ಲಕ್ಷ ಹಣ ಪ್ರತಿವಾದಿ ಕೊಟ್ಟು ಸದರಿ 02-ಎಕರೆ ಜಮೀನು ಖರೀದಿ ಮಾಡಿರುತ್ತೇನೆ. ನಾನು ನಾನು 02-ಎಕರೆ ಜಮೀನು ಖರೀದಿ ಮಾಡಿ 08-ವರ್ಷಗಳಾಗಿರುತ್ತವೆ. ನಾನು ರೂ.8,00,000/- ಗಳಿಗೆ 02-ಎಕರೆ ಜಮೀನು ಖರೀದಿ ಮಾಡಿರುತ್ತೇನೆ ಎಂದು ನಿಪಿ-1 ರಲ್ಲಿ ಬರೆಸಿರುತ್ತೇನೆ. ನಾನು ಪ್ರತಿವಾದಿಗೆ ರೂ.4,00,000/- ಗಳನ್ನು ಬ್ಯಾಂಕಿನ ಮುಖಾಂತರ ನೀಡಿದ್ದು ಮತ್ತು ರೂ.4,00,000/- ನಗದು ರೂಪದಲ್ಲಿ ಹಣ ನೀಡಿರುತ್ತೇನೆ. ನಾನು ಬ್ಯಾಂಕ ಮುಖಾಂತರ ನನ್ನ ಖಾತೆಯಿಂದ 4 ಲಕ್ಷ ಹಣ ಪ್ರತಿವಾದಿಯ ಸಾಲದ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ. ನಾನು ಬ್ಯಾಂಕ ಮುಖಾಂತರ ನನ್ನ ಖಾತೆಯಿಂದ 4 ಲಕ್ಷ ಹಣ ಪ್ರತಿವಾದಿಯ ಸಾಲದ ಖಾತೆಗೆ ವರ್ಗಾವಣೆ ಮಾಡಿದ ಬಗ್ಗೆ ದಾಖಲೆಗಳು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯ ಯಾವ ಬ್ಯಾಂಕಗೆ ಹಣ ವರ್ಗಾವಣೆ ಮಾರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಖರೀದಿ ಹಣ ನೀಡಿದ್ದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಸ್ವತ್ತು ಖರೀದಿ ಮಾಡಿದಾಗಿನಿಂದ ಎಷ್ಟು ಬಾರಿ ಜಮೀನಿಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ ನಾನು ದಿನಾಂಕ ಹೋಗುತ್ತೇನೆ ಎಂದು ನುಡಿಯುತ್ತಾರೆ.

ನಾನು ಖರೀದಿಸಿದ ಜಮೀನಿನ ಪೂರ್ವಕ್ಕೆ ಧರ್ಮಣ್ಣರವರ ಜಮೀನು, ಪಶ್ಚಿಮಕ್ಕೆ ಭೂತಾಳಿರವರ ಜಮೀನು, ಉತ್ತರಕ್ಕೆ ಸಿದ್ದಪ್ಪರವರ ಜಮೀನು, ದಕ್ಷಿಣಕ್ಕೆ ನನ್ನ ಜಮೀನು ಇದೆ.

ದಿನಾಂಕ 20.05.2021 ರಂದು ಮುಂಚೆ ನಾನು ದಾವಾ ಜಮೀನಿಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಯಾವ ಬೆಳೆಗಳಿದ್ದವು ಎಂದರೆ ಸಾಕ್ಷಿ ಹೆಸರು ಬೆಳೆ ಇತ್ತು ಎಂದು ನುಡಿಯುತ್ತಾರೆ. ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧಿನತೆಗೆ ತೊಂದರೆ ಕೊಡುತ್ತಿದ್ದಾರೆಂದು ನಿಪಿ-1 ರಲ್ಲಿರುವ ಸಾಕ್ಷಿದಾರರನ್ನು ಹೇಳಿರುತ್ತೀರಾ ಎಂದರೆ ಸಾಕ್ಷಿ ನಾನು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಯಾವಾಗ ತೊಂದರೆ ಕೊಡುತ್ತಿದ್ದರು ಆ ಸಮಯದಲ್ಲಿ ಸಾಕ್ಷಿದಾರರಿಗೆ ಹೇಳಿರುತ್ತೇನೆ.

ಪ್ರತಿವಾದಿಯ ವಿರುದ್ಧ ದಾವಾ ಸ್ವತ್ತು ಖರಿದಿ ಕೊಟ್ಟು ನಮಗೆ ತೊಂದರೆ ಕೊಡುತ್ತಿದ್ದಾಳೆಂದು ಪೋಲಿಸರಿಗೆ ನೀಡಿರುತ್ತೀರಾ ಎಂದರೆ ಸಾಕ್ಷಿ ದೂರು ನೀಡಿರುತ್ತೇನೆ ಆದರೆ ದೂರು ನೀಡಿದ ವರ್ಷ ನನಗೆ ಗೊತ್ತಿಲ್ಲ. ಸದರಿ ದೂರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನನ್ನ ಗಂಡ ಉರಿನಲ್ಲಿ ಪ್ರಮುಖ ವ್ಯಕ್ತಿ ಇರುತ್ತಾರೆ ಎಂದರೆ ಸರಿ. ಊರಲ್ಲಿ ಸಣ್ಣಪುಟ್ಟ ತೊಂದರೆಗಳಾದರೆ ನನ್ನ ಯಜಮಾನೆ ಬಗೆಹರಿಸುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಬೆಳೆ ಸಾಲ ಕೊಡಿಸುತ್ತೇನೆ ಎಂದು ಅವರಿಂದ ಎಲ್ಲಾ ದಾಖಲೆಗಳನ್ನು ಪಡೆದು ಉಪ ನೊಂದಣಾಧಿ ಕಚೇರಿಯಲ್ಲಿ ನನ್ನ ಗಂಡ ಪ್ರತಿವಾದಿಗೆ ಬೆಳೆ ಸಾಲ ಕೊಡಿಸುತ್ತೇನೆ ಎಂದು ಮೋಸದಿಂದ ಖರೀದಿ ಪತ್ರ ಮಾಡಿಸಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಪ್ರತಿ ಎಕರೆಗೆ 4 ಲಕ್ಷ ರೂ.ನಂತೆ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ರೂ.4,00,000/- ಗಳನ್ನು ಬ್ಯಾಂಕಿನ ಮುಖಾಂತರ ನೀಡಿದ್ದು ಮತ್ತು ರೂ.4,00,000/- ನಗದು ರೂಪದಲ್ಲಿ ಹಣ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬ್ಯಾಂಕ ಮುಖಾಂತರ ನನ್ನ ಖಾತೆಯಿಂದ 4 ಲಕ್ಷ ಹಣ ಪ್ರತಿವಾದಿಯ ಸಾಲದ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸಾಲದ ಖಾತೆಗೆ ವರ್ಗಾವಣೆ ಮಾಡಿದ ಬಗ್ಗೆ ಯಾವುದೆ ದಾಖಲೆಗಳಿಲ್ಲ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಗೆ ರೂ.4,00,000/- ನಗದು ರೂಪದಲ್ಲಿ ಯಾರ ಸಮಕ್ಷಮ ನೀಡಿರುತ್ತೀರಿ ಎಂದರೆ ಸಾಕ್ಷಿ ಯಂಕಂಚಿ ಭೀಮರಾವ ಮತ್ತು ಶರಣಬಸ್ಸುರವರ ಸಮಕ್ಷ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಪ್ರತಿವಾದಿಯ 02 ಎಕರೆ ಜಮೀನನ್ನು ಪ್ರತಿ ಎಕರೆಗೆ 4 ಲಕ್ಷ ರೂ. ನಂತೆ ಖರೀದಿ ಮಾಡಿದ ಬಗ್ಗೆ ಮತ್ತು ನಾನು ಪ್ರತಿವಾದಿಗೆ ರೂ.4,00,000/- ಗಳನ್ನು ಬ್ಯಾಂಕಿನ ಮುಖಾಂತರ ನೀಡಿದ್ದು ಮತ್ತು ರೂ.4,00,000/- ನಗದು ರೂಪದಲ್ಲಿ ಹಣ ನೀಡಿರುತ್ತೇನೆ ಎಂದು ಮತ್ತು ನಾನು ಬ್ಯಾಂಕ ಮುಖಾಂತರ ನನ್ನ ಖಾತೆಯಿಂದ 4 ಲಕ್ಷ ಹಣ ಪ್ರತಿವಾದಿಯ ಸಾಲದ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ.

ಪ್ರತಿವಾದಿ ಅಕ್ಷರಸ್ಥಳಿದ್ದು ಅದರ ದುರುಪಯೋಗ ಮಾಡಿಕೊಂಡು ಮತ್ತು ಅವರಿಗೆ ಬೆಳೆ ಸಾಲ ಕೊಡಿಸುವುದಾಗಿ ನನ್ನ ಗಂಡ ಖೊಟ್ಟಿಯಾಗಿ ನನ್ನ ಹೆಸರಿಗೆ ದಾವಾ ಸ್ವತ್ತು ಖರಿದಿ ಮಾಡಿಸಿರುತ್ತಾನೆ ಎಂದರೆ ಸರಿಯಲ್ಲ. ಜೇವರ್ಗಿಯಿಂದ ಜನಿವಾರ ಗ್ರಾಮ ಎಷ್ಟು 10 ಕಿ.ಮೀ. ಅಂತರದಲ್ಲಿ ಇರಬಹುದು. ನಾನು ಜೇವರ್ಗಿಯ ದತ್ತ ನಗರದಲ್ಲಿ ಬಾಡಿಗೆ ಮನೆಯಲ್ಲಿ 14-ವರ್ಷಗಳಿಂದ ಇರುತ್ತೇನೆ. ನನ್ನ ಕುಟುಂಬದಲ್ಲಿ ಎತ್ತುಗಳು ಇರುತ್ತವೆ.

ನನ್ನ ಗಂಡನ ಹಾಗೂ ಅವರ ಕುಟುಂಬದಲ್ಲಿರುವ ಆಸ್ತಿಗಳು ಇನ್ನು ಪಾಲು ಆಗಿರುವುದಿಲ್ಲ. ನನ್ನ ಗಂಡನಿಗೆ 03-ಜನ ಸಹೋದರರು ಇರುತ್ತಾರೆ. ನನ್ನ ಗಂಡನ ಹಾಗೂ ಆತನ ಸಹೋದರರ ನಡುವೆ ಜಮೀನು ವಿಚಾರವಾಗಿ ತಕರಾರು ಇದೆ ಎಂದರೆ ಸರಿ. ನನ್ನ ಗಂಡನ ಸಹೋದರರು ದಾವಾ ಆಸ್ತಿಯನ್ನು ಸಾಗುವಳಿ ಮಾಡುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಕುಟುಂಬಂದ ಆಸ್ತಿಗಳನ್ನು ನನ್ನ ಮೈದುನರು ಸಾಗುವಳಿ ಮಾಡುವುದಿಲ್ಲ ಆದರೆ ಬೇರೆಯರಿಗೆ ಕಟಗುತ್ತಿಗೆ ಹಾಕುತ್ತಾರೆ ಎಂದರೆ ಸರಿಯಲ್ಲ.

ಪ್ರತಿವಾದಿ ನನ್ನ ಕಬ್ಜಾ ವಹಿವಾಟಿಗೆ ತೊಂದರೆ ಕೊಡುತ್ತಿದ್ದಾಳೆಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಈಗಲೂ ಸಹ ಪ್ರತಿವಾದಿಯ

ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. 2017 ರಲ್ಲಿ ದಾವಾ ಆಸ್ತಿಯನ್ನು ಪ್ರತಿವಾದಿಗೆ ಯಾವುದೆ ಪ್ರಾಪಂಚಿಕ ಅಡಚಣೆಯಿರಲಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗೆ ಹಣದ ಅಡಚಣೆಯಿದೆ ನನ್ನ ಜಮೀನು ಮಾರಾಟ ಮಾಡುವುದು ಇದೆ ಎಂದು ನನ್ನ ಹತ್ತಿರ ಯಾವಾಗ ಬಂದಿದ್ದರು ಎಂದರೆ ಸಾಕ್ಷಿ 15-ದಿನಗಳ ಮುಂಚೆ ನನ್ನ ಹತ್ತಿರ ಬಂದಿರುತ್ತಾರೆ. ಪ್ರತಿವಾದಿಯ ಜೊತೆ ಭೀಮರಾವ ಯಂಕಂಚಿ, ಶರಣಬಸ್ಸು, ಭೀಮಣ್ಣ ಗುತ್ತೆದಾರ ಮತ್ತು ಅಮೃತ ಹಳ್ಳಿ ಎನ್ನುವವರು ಬಂದಿರುತ್ತಾರೆ. ಸದರಿ ಜನರು ಜೇವರ್ಗಿಯ ನಮ್ಮ ಮನೆಗೆ ಬಂದಿರುತ್ತಾರೆ. ಖರೀದಿ ವ್ಯವಹಾರವಾದ ನಂತರ ಪ್ರತಿವಾದಿಗೆ ಮುಂಗಡವಾಗಿ ರೂ.1000/- ಹಣ ನೀಡಿರುತ್ತೇವೆ. ಸದರಿ ಖರೀದಿ ವ್ಯವಹಾರವಾದ ನಂತರ ಪ್ರತಿವಾದಿಗೆ ಹಣ ನೀಡಿದ್ದರ ಬಗ್ಗೆ ಪ್ರತವನ್ನು ಭೀಮರಾವ ಎನ್ನುವವರು ಬರೆದಿರುತ್ತಾರೆ. ಸದರಿ ಮನೆಯಲ್ಲಿ ಬರೆದ ಪತ್ರದಲ್ಲಿ 1-ತಿಂಗಳ ಒಳಗಾಗಿ ಖರೀದಿ ಪತ್ರ ಮಾಡಬೇಕೆಂದು ಬರೆಸಿರುತ್ತಾರೆ. ಸದರಿ ಕಾಗದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ ಯಾವುದೆ ಖರೀದಿ ಪತ್ರ ಬರೆದುಕೊಡದಿದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ